ವಾರಿಜನೇತ್ರನೊರ್ವ ಕುಲವರ್ಧನನಾಗಲೆವೇಳ್ಕುಮೆಂದು ತ ।
ದ್ದ್ವಾರಕೆಯೆಂಬ ತನ್ನ ಪುರಮಂ ಜಳರಾಶಿಗೊಳಾಳಿಸಂದು ಸು ॥
ಸ್ಮೇರಮುಖಾಂಬುಜಂ ಪದೆದು ವಾಕ್ಯವ ನಾಡಿದನೊಂದನೈದೆ ದೈ ।
ತ್ಯಾರಿಸನಾತನಂ ಕರೆದು ತನ್ನ ವಿರಾಜಿಪ ಯೋಗಮಾಯೆಯಂ ॥ ೨೦ ॥

ತೆಂಗಿ ಮದೀಯವಂಶಜನ ದೇವನನಾದಿಯೊಳೊಯ್ದು ಯಾದವಾ ।
ತ್ತುಂಗಧರಾಧ್ರದಲ್ಲಿರಿಸಿದಂ ಸನಕಾಖ್ಯಮಹಾಮುನೀಶ್ವರಂ ॥
ಕಂಗೊಳಿಪಂತೆ ರುಕ್ಮಿಣಿಯ ಸಂತತಿಯಂ ಪರಿಪಾಲಿಸೀಗಳೆಂ ।
ದಿಂಗಿತದಿಂದೆ ನೀನವರ ಕಾಮ್ಯವನಿತ್ತು ಮನೋನುರಾಗದಿಂ ॥ ೨೧ ॥

ಜಿತದೈತ್ಯಂ ಪೇಳ್ದ ಮಾತಂ ಸ್ಫುರಿತಕರುಣೆ ಕೇಳ್ದಾಗಲೇ ಪ್ರೀತಿವ
ಟ್ಟಾ । ಕ್ಷಿತಿಯೊಳ್ ಕರ್ಣಾಟದೇಶಾಧಿಕಮಹಿಶಪುರಕ್ಷ್ಮಾಧ್ರದೊಳ್ ತಾ
ನೆ ಬಂದಿ ॥ ದುರ್ಗ ತದೀಯಕ್ಷ್ಮಾಧಿನಾಥರ್ಕಳಿಸಿಭರಿಪುಪೀತಸ್ಥರಂ ಮಾಡಿ
ದುರ್ಗಾ । ಸತಿ ತದ್ರಕ್ಷಾರ್ಥಮಿರ್ಪಳ್ ಮಹಿಷದನುಜಹೃಚ್ಛಲ್ಯೆಯಾ
ನಂದದಿಂದಂ ॥ ॥ ೨೨ ॥

ವರದಂ ನಾರಾಯಣಂ ಯಾದವನೃಪನಿವಹಾರಾಧ್ಯಪಾದಾಂಬುಜಂ
ಭಾಸುರದಿವ್ಯಾಂಗಂ ಲಸದ್ಯಾದವಗಿರಿಯೊಳ್ ತಾನಿರ್ಪನಂತೊಂದಿ ದೇ
ವ್ಯೇ ॥ ತ್ಕರಪೃತ್ಪದ್ಮಸ್ಥೆ ಕೃಷ್ಣಾನುಜೆ ವಿಲಸಿತಚಾಮುಂಡಿಕಾನಾಮ
ಮಂ ತಾ । ಳ್ದುರುಕಾರುಣ್ಯಾಂಗಿಯಿರ್ಪಳ್ ಮಹಿಷಪುರಮಹಾಗ್ರಾಮ
ದೊಳ್ ಸ್ಥೈರ್ಯದಿಂದಂ ॥ ॥ ೨೩ ॥

ವನಜಾತಾಕ್ಷಮಣಿಸ್ಫುರನ್ಮಕುಟಮಂ ಕೊಂಡುಯ್ವಲಾಗಳ್ ವಿರೋ ।
ಚನದೈತ್ಯಂ ತರಲಂತದಂ ಖಗವರಂ ಸೀಳ್ದಿಕ್ಕಿ ಯಾದೈತ್ಯನಂ ॥
ಘನಕೋಟೀರವನೈದೆ ಕೊಂಡು ಬರುತುಂ ಗೋಮಂತಶೈಲಾಗ್ರದೊಳ್ ।
ಮನವೊಲ್ದೀಕ್ಷಿಸಿ ಕೃಷ್ಣನಂ ಹರಿಯೆ ತಾನೆಂದಿತ್ತನಾಮೌಳಿಯಂ ॥

ಅನವರತನ್ನರಂಜಿತಕಿರೀಟಮನಾವ್ರಜಭಾಮಿನೀಪ್ರಿಯಂ ।
ಜಾನಿಸಿ ನೈಜವಂಶಜನದೇವತೆಯಾಗಿಹ ಯಾದವಾಚಲ ॥

ಸ್ಥಾನನಿವಾಸಿಗಿತ್ತನದುಕಾರಣಮೀಗಳತೀವಕಾಂತಿಯಿಂ ।
ಭಾನುವಿನಂತೆ ವೈರಮುಡಿಯೆಂಬ ಶುಭಾಖ್ಯಮನಾಂತು ರಂಜಿಕುಂ॥ ೭೫

ಮೊದಲೊಳ್ ಶ್ರೀದೇವಕೀಗರ್ಭದೊಳಿಹ ಬಲನಂ ತಂದು ತಾಂ ರೋ
ಹಿಣೀಗ । ರ್ಭದೊಳಂತಾಯೋಗಮಾಯಾಸತಿಯಿರಿಸಿದಳಂತಾಯದು
ಕ್ಷ್ಮೇಂದ್ರವಂಶಾ ॥ ಸ್ಪದಪೃಥ್ವೀನಾಥರಂ ದ್ವಾರಕೆಯಿನತಿದಯಾಪಾಂಗೆ
ಚಾಮುಂಡಿ ತಂದು । ನ್ಮದದಿಂದಂ ಸ್ಥಾಪಿಸಲ್ಗೆಯ್ದಳನಘ ಮಹಿಶೂಗ್ರಾ
ಮದೊಳ್ ವರ್ಧಿಸುತ್ತುಂ ॥ ॥೭೬॥

ಮಿಗೆ ಭಕ್ತ್ಯುನ್ನತಿಯಿಂ ಹೃದಂಬುಜದೊಳಾಚಾಮುಂಡಿಕಾದೇವಿಯಂ।
ನಗುತುಂ ಧ್ಯಾನಿಸಿ ತತ್ಪದಾಂಬುಜಮನಂತಾರಾಧನಂಗೆಯ್ಯುತುಂ ॥
ಮೃಗರಾಜೋರುಪರಾಕ್ರಮರ್ ಶಶಿಕುಲೋತ್ತಂಸರ್ ಜನಾನಂದಕರ್ ।
ಸುಗುಣರ್ ಯಾದವವಂಶಸಾರಸದಿನೇಶರ್ ಶೋಭಿಸಿರ್ದರ್ ನೃಪರ್ ॥೭೭॥

ಚಿರಕಾಲಂ ಶಶಿವಂಶಮಿರ್ದುದು ಮುದಂಬೆತ್ತಾಪ್ರತಿಷ್ಠಾನದೊಳ್ ।
ಪರಿಪೂರ್ಣೋತ್ಸವಮಾಂತು ಸನ್ಮಧುರೆಗಂ ಬಂದಾಬಳಿಕ್ಕೈದಿಯೊ ॥
ಪ್ಪಿರಲಾದ್ವಾರಕಿಯೆಂಬ ಪತ್ತನಮನುದ್ಯತ್ಸೌಖ್ಯಮಾಂತಿರ್ದು ಬಂ ।
ಧುರಕರ್ಣಾಟಕದೇಶಮಂ ಕ್ರಮದೆ ಸೇರಿತ್ತುನ್ನತಾನಂದದಿಂ ॥೭೮॥

ಕುಮುದಾಪ್ತಾನ್ವಯದಲ್ಲಿ ಗರ್ವಿತರಿಪೂರ್ವೀಂದ್ರೋತ್ತಮಾಂಗಸ್ಫುರ
ತ್ಕಮನೀಯಾಮಿತಮೌಳಿರತ್ನರುಚಿಸಂಘಾಪ್ತಾಂಘ್ರಿಪದ್ಮಂ ಲಸ ॥
ತ್ಸುಮನೋಭೂರುಹಮಧ್ಯದೊಳ್ ಮೆಱೆವುದೆಂತಾಪಾರಿಜಾತಂ ಧರಾ ।
ರಮಣಂ ಬೆಟ್ಟದಚಾಮರಾಜನುರುಸೌಂದರ್ಯಾಲಯಂ ಪುಟ್ಟಿದಂ ॥ ೭೯॥

ಆನೃಪಚಕ್ರವರ್ತಿಗೆ ತನೂಭವರಾದನೂನಮಾದ ವೈ ।
ತಾನಧನಂಜಯತ್ರಯವಿಲಾಸಿತಕಾಂತಿವಿಲಾಸಮೂರ್ತಿಗಳ್ ॥
ಸೂನಶರೋಪಮರ್ ಪಿರಿಯನುಂತವರೊಳ್ ವರತಿಮ್ಮರಾಜನು ।
ರ್ವೀನುತಕೃಷ್ಣರಾಜನುರುಚಾಮನೃಪಂ ಸಲೆ ಮೂವಱುಂತವರ್ ॥

ಮುದದಿಂದಿತ್ತಪನಾದರಂ ಮಿಗೆ ಧರಾಮರ್ತ್ಯರ್ಗೆ ಸತ್ಸೌಂದರಾ ।
ಸ್ಪದಕನ್ಯಾತತಿಯುಂ ತದಾದ್ವಿತರಣವ್ಯಾಪಾರಹಸ್ತಂ ಸಮಂ ॥
ತೊದವಿಂ ಕ್ಷತ್ರಿಯವೃತ್ತಿಶತ್ರುಜನಕಂ ದೇವಾಂಗನಾನೀಕಮಂ ।
ಪದುಳಂಪಾಳ್ದಿರದೀವುದಾತನ ಮಹಾಖಡ್ಗಾಂಬುಧಾರಾನ್ವಿತಂ ॥ ೧೧೫ ॥

ವರಕೌಕ್ಷೇಯಕಖಂಡಿತಾರಿನೃಪರುದ್ಯತ್ಕೀರ್ತಿ ತಾಂ ಭೂಮಿಯೊಳ್ ।
ನೆರೆ ಸಂಚಾರಕೆ ತಾಣಮಿಲ್ಲದೆ ತೊಳಲ್ದಿರ್ದು ತಂದು ರೂಪಾಂತರಾ ॥
ವರಣಂಗೈದುಱೆ ಚಿಕ್ಕದೇವಜನರಾಟ್ಪಾರ್ಶ್ವಂಗಳೊಳ್ ಚಾರುಚಾ ।
ಮರದಾಕಾರಮನಾಂತಿನಿತ್ತನಗೆ ಸುಶ್ವೇತದುರ್ವಿತಾನುವೃರ್ಗಮಂ ॥ ೧೧೬ ॥

ಸಕಲಜ್ಞಾದೃತಸರ್ವಮಂಗಳಶಿರೋರತ್ನಂ ಶುಭಾಂಗಂ ಲಸ ।
ತ್ಪ್ರಕಟಶ್ರೀಕಲಕಂದಮಾದ ಶಶಿಯುಂ ಶ್ರೀಚಿಕ್ಕದೇವೇಂದ್ರಮ ॥
ಸ್ತಕಮಾಘ್ರಾಣಿಸುವಂತೆ ರಂಗನಿಭು ಸೇವಾಧಿಕ್ಯದಿಂ ನೋಡುತಿ ।
ರ್ದ ಕರಂ ತಾಳ್ದು ನಿರಂತರಂ ಚರಿಯಿಪಂ ಶುಭ್ರಾತಪತ್ರಾಂಗಮಂ ॥

ವ॥ ಇಂತತಿಶಯಪ್ರತಾಪಕೀರ್ತಿಗುಣವಿತರಣಶೌರ್ಯಗಾಂಭೀರ್ಯಧೈರ್ಯ ಸ್ಥೈರ್ಯವಿನಯೋಕ್ತಿಗಳಂ ಯದುವಂಶಚೂಡಾರತ್ನಮಾಗಿರ್ದ ಚಿಕದೇವಮಹಾರಾಜನಾಕರ್ಣಿಸಿ ಸಂಗೀತಸಾಹಿತ್ಯರಸಪ್ರಮೋದಿತಹೃದಯನುಮಾರೋಗಣೆಯಂ ಗೈದು ಶಯ್ಯಾಲಯದ ದರದಳಿತಪರಿಮಳಮಿಳಿತಕುಸುಮವಿಸರಶಯನಾಂಚಿತಮಣಿಪರ್ಯಂಕಪೀಠಹಂಸತೂಲಿಕಾತಲ್ಪಸ್ಥಲದೊಳ್ ಸುಖನಿದ್ರಾಸಕ್ತನಾಗಿರ್ದನಾಪ್ರಸ್ತಾವದೊಳ್

ಜಲಪಕ್ಷಿಗಳುಲಿಯಿಂದಂ ।
ಕಲಹಂಸಂ ಕಮಲತಲ್ಪದಿಂದೇಳ್ವಂತೀ ॥
ಯಿಳೆಯರಸಂ ಗಾಯಕಮಂ ।
ಗಳಗಾನಮನಾಲಿಸುತ್ತೆ ಶಯನಸ್ಥಲದಿಂ ॥ ॥೧೧೮॥

ವನಜಾಪ್ತೋದಯದಲ್ಲಿ ರಂಗವಿಭುಪಾದಾಂಭೋಜಮಂ ಸ್ವಾಂತದೊಳ್ ।
ನೆನೆದೆರ್ದಾಗಳೆ ನೋಡಿ ದರ್ಪಣದೊಳಾತ್ಮೀಯಾಸ್ಯಮಂ ದಂತಧಾ ॥

